ಮೇಲ್ಕಂಡ ಎಲ್ಲಾ ವಿಚಾರಗಳನ್ನು ಸೂಕ್ಷ್ಮವಾಗಿ ಪರಿಶೀಲಿಸಿದೆ. ನಂತರ ನಾನು ಈ ಹಕ್ಕುಚ್ಯುತಿ ವಿಷಯವನ್ನು ಪ್ರಸ್ತಾಪಿಸಲು ನನ್ನ ಅನುಮತಿಯನ್ನು ತಡೆಹಿಡಿದಿದ್ದೇನೆ.

ಈಗ ಸದನವನ್ನು ಮಧ್ಯಾಹ್ನ 3 ಗಂಟೆ 30 ನಿಮಿಷದವರೆಗೆ ಮುಂದೂಡುತ್ತಿದ್ದೇನೆ.

(ಸದನವು 2 ಗಂಟೆ 11 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನಃ 3 ಗಂಟೆ 20 ನಿಮಿಷಕ್ಕೆ ಸೇರಲು ನಿಶ್ಚಯಿಸಿತು)

3-40 ಗಂಟೆಗೆ ಸದನ ಪುನಃ ಸಮಾವೇಶಗೊಂಡಿತು.

(ಮಾನ್ಯ ಸಭಾಧ್ಯಕ್ಷರು (ಶ್ರೀ ಎಂ.ವಿ. ವೆಂಕಟಪ್ಪ) ನವರು ಅಧ್ಯಕ್ಷಪೀಠದಲ್ಲಿ ಉಪಸ್ಥಿತರಾದ್ದರು)

5. **ಅಧ್ಯಕ್ಷರ ಅಪ್ಪಣೆ ಮೇರೆಗೆ:**

ದಿ: 15.3.02 ರಂದು ಬಿನ್ನಿಪೇಟೆ ಮತಕ್ಷೇತ್ರದ ಕೆಲವು ಭಾಗಗಳಲ್ಲಿ ನಡೆದಂತ ಘಟನೆ ಕುರಿತು -

ಅಧ್ಯಕ್ಷರು : ಸೋಮಣ್ಣನವರೇ, ಐದು ನಿಮಿಷದಲ್ಲಿ ನಿಮ್ಮ ವಿಷಯವನ್ನು ಮುಗಿಸಿ, ಅಮೇಲೆ ಬೇರೆ ವಿಷಯವನ್ನು ತೆಗೆದುಕೊಳ್ಳೋಣ.

ಶ್ರೀ ವಿ. ಸೋಮಣ್ಣ (ಬಿನ್ನಿಪೇಟೆ) : ಸನ್ಮಾನ್ಯ ಅಧ್ಯಕ್ಷರೇ, ದಿನಾಂಕ 15-03-2002ರಂದು, 1992ರಿಂದ 15.3.02ರ ಕೂಡ ಒಂದೇ ಒಂದು ಕಹಿ ಘಟನೆಯೂ ನಡೆಯದೇ ಇರತಕ್ಕಂಥ ಸಂದರ್ಭದಲ್ಲಿ, ಯಾವ ಉದ್ದೇಶಕ್ಕೋಸ್ಕರವಾಗಿ ಇಡೀ ರಾಷ್ಟ್ರದಲ್ಲಿ ಎಲ್ಲಿಯೂ ಕೂಡ ಒಂದು ಸಣ್ಣ ಘಟನೆಯೂ ನಡೆಯದೇ ಇದ್ದರೂ ಕೂಡ, ಬಿನ್ನಿಪೇಟೆ ಕ್ಷೇತ್ರದ ಪಾದರಾಯನಪುರ, ಜಗಜೀವನರಾಂನಗರ, ಹಳೇಗುಡ್ಡದಹಳ್ಳಿ, ರಾಯಪುರ, ನರಸಿಂಹಯ್ಯ ಕಾಂಪೌಂಡ್‌ನಂಥ ಸೂಕ್ಷ್ಮವಾದ ಪ್ರದೇಶಗಳಲ್ಲಿ ಸಾಯಂಕಾಲ ಸುಮಾರು ಎಂಟು-ಎಂಟೂವರೆ ಗಂಟೆಗೆ ಹಳೇಗುಡ್ಡದಹಳ್ಳಿ ಬಸ್‌ಸ್ಟಾ ್ಯಂಡಿನಲ್ಲಿ ಕೆಲವು ದುಷ್ಕರ್ಮಿಗಳು ಮೂರು-ನಾಲ್ಕು ಬಾಟಲುಗಳನ್ನು ಹೊಡೆದು ಒಂದು ಕೋಮಿನವರಿಗೆ ತೊಂದರೆ ಕೊಡುತ್ತಿದ್ದಾರೆ ಎಂದು ಕೂಗುಹಾಕಿಕೊಂಡು ಹೋಗಿದ್ದು ಘಟನೆಯಾದಾಗ, ಹಳೇಗುಡ್ಡದಹಳ್ಳಿ ಸುಜಾತ ಟೆಂಟಿನಬಭಿ ಇದ್ದಂತಹ ಒಂದು ಬೇಕರಿ ಬಾರ್‌ರೆಸ್ಟೋರೆಂಟ್ ಮತ್ತು ವೈನ್‌ಶಾಪ್ ಅಲ್ಲದೆ ಕೆಲವು ಅಂಗಡಿಗಳು ಮತ್ತು ಒಂದು ಸೈಕಲ್‌ಮೋಟಾರ್‌ನ್ನು ಸುಟ್ಟು ಹೊಸಹಳ್ಳಿ ಮುಖ್ಯ ರಸ್ತೆಗೆ ಬಂದು ಸುಮಾರು ಒಂಬತ್ತೂವರೆ-ಒಂಬತ್ತು ಮುಕ್ಕಾಲು ಗಂಟೆಯೊಳಗಡೆ ಇಲ್ಲದ್ದನ್ನು ಅಪಪ್ರಚಾರ ಮಾಡಿ ಗಾಳಿಸುದ್ದಿ ಹರಡಿಸಿ ಪ್ರಚೋದನೆ ಮಾಡುತ್ತಿದ್ದು ಕಂಡು ತಕ್ಷಣವೇ ಕರ್ತವ್ಯನಿರತರಾದ ಪೊಲೀಸಿನವರು ತಮ್ಮ ಕರ್ತವ್ಯನಿರ್ವಹಣೆಯಲ್ಲಿ ಸಮಯ ಪ್ರಜ್ಞೆಯನ್ನು ಉಪಯೋಗಿಸಿಕೊಂಡು ಅವರು ತಮ್ಮ ಸಿಬ್ಬಂದಿಯಲ್ಲದೆ ಸುತ್ತಮುತ್ತಲಿನ ಸಿಬ್ಬಂದಿಯನ್ನು ಕೂಡ ಕರೆಸಿ ಎಲ್ಲಿ ಯಾವಾಗಲೂ ಕೂಡ ಗಲಾಟೆ ಇಲ್ಲದೇ ಇರುವಂಥ, ಸ್ಥಳಗಳಲ್ಲಿ ಈ ಗಲಾಟೆ ಏನು ಆಯಿತು, ತಕ್ಷಣವೇ ಅವರು ಜಾಗರೂತರಾದರೂ ಕೂಡ ಸುಮಾರು ರಾತ್ರಿ 10-30 ಗಂಟೆ ಒಳಗಡೆ ಹೊಸಹಳ್ಳಿ ಮುಖ್ಯರಸ್ತೆಯಲ್ಲಿ ಪಾದರಾಯ ಪುರದಿಂದ, ವಿಜಯನಗರದಿಂದ ಬೇರೆಬೇರೆ ಭಾಗಗಳಿಗೆ ಹೋಗತಕ್ಕಂಥ ಬಹುತೇಕರಿಗೆ ಈ ಘಟನೆ ಬಗ್ಗೆಯಾಗಲಿ, ಗಾಳಿಸುದ್ದಿ ಬಗ್ಗೆಯಾಗಲಿ ಗೊತ್ತಿಲ್ಲದೇ ಇರತಕ್ಕಂಥ ಪರಿಸ್ಥಿತಿಯಲ್ಲಿ ಬಹುತೇಕರು ಅಲ್ಲಿ ಬಂದಂಥ ಸಂದರ್ಭದಲ್ಲಿ ರಾತ್ರಿ ಸುಮಾರು 10.30 ಸಮಯದಲ್ಲಿ ಪ್ರಭಾಕರ ಎನ್ನುವವರನ್ನು ಆ ಹೊಸ

ಹಳ್ಳಿ ಮುಖ್ಯರಸ್ತೆಯ ಸೇತುಬಳಿ ಅವರ ಸೈಕಲ್ ಮೋಟರನ್ನು ತಡೆಗಟ್ಟಿ ಅವರ ಮೇಲೆ ಮಾರಣಾಂತಿಕವಾಗಿ ಹಲ್ಲೆಮಾಡಿ, ಸಿಕ್ಕಿಸಿಕ್ಕಿದವರನ್ನು ಹಿಡಿದುಕೊಂಡು ಹೊಡೆಯುತ್ತಿದ್ದಾರೆ ಎಂಬುದನ್ನು ಆರಿತುಕೊಂಡು ಪೊಲೀಸಿನವರು ತಮ್ಮ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಿದ್ದಾರೆ. ಇಷ್ಟೆಲ್ಲಾ ಮಾಡಿ ರಾತ್ರಿ ಸುಮಾರು ಅಲ್ಲಿಂದ ಬಂದವರು 13ನೇ ಕ್ರಾಸ್, 9ನೇ ಮತ್ತು 10ನೇ ಮುಖ್ಯರಸ್ತೆ, ನರಸಿಂಹಯ್ಯ ಕಾಂಪೌಂಡ್ ಈ ಪ್ರದೇಶಗಳಲ್ಲಿ ಒಂದು ರೀತಿಯ ಪ್ರಕ್ಷುಬ್ಧತೆಯನ್ನು ಉಂಟುಮಾಡಿ ಸುಮಾರು ಜನರಿಗೆ ಮತ್ತೆ ಅನೇಕ ಅಂಗಡಿಗಳಿಗೆ, ಮನೆಗಳಿಗೆ ಜಖಂಗೊಳಿಸಿದಾಗ ಕೆಲವರು ತುಂಬಾ ಅನಾಹುತ ಆದವರು ಪೊಲೀಸ್ ಠಾಣೆಗೆ ಹೋಗಿ ದೂರು ನೀಡುವುದಕ್ಕೂ ಕೂಡ ಬಹಳ ಕಷ್ಟವಾಯಿತು. ಆದರೂ ಕೂಡ ಪೊಲೀಸಿನವರ ಮುನ್ನೆಚ್ಚರಿಕೆಯಿಂದ ಆಗಬಹುದಾದಂಥ ಅನಾಹುತಗಳು ತಪ್ಪಿದರೂ ಕೂಡ ಅಂದು ನಡೆದಂಥ ರಾತ್ರಿಯ ಘಟನೆ ಮತ್ತೆ ಮರುಕಳಿಸಬಾರದು ಎನ್ನುವ ದೃಷ್ಟಿಯಿಂದ ರಾತ್ರಿ ಎಲ್ಲಾ ಕಡೆ ಪೊಲೀಸ್ ಜಂಟಿ ಕಮೀಷನರ್ ಆದಿಯಾಗಿ ಅನೇಕ ಹಿರಿಯ ಅಧಿಕಾರಿಗಳು ಮತ್ತು ಅವರ ಸಿಬ್ಬಂದಿಯವರು ತಮ್ಮ ಕರ್ತವ್ಯ ನಿರ್ವಹಣೆಗೆ ಎಂದೂ ಕೂಡ ಚ್ಯುತಿ ಬಾರದ ಹಾಗೆ ನಡೆದುಕೊಂಡರೂ ಕೂಡ ಈ ಕಿಡಿಗೇಡಿಗಳು ಎಲ್ಲೋ ಒಂದು ಕಡೆ ತಮ್ಮ ವ್ಯವಸ್ಥಿತವಾದ ಹುನ್ನಾರವನ್ನು ಮಾಡಿ ಸುಮಾರು ಜನರ ಆಸ್ತಿಪಾಸ್ತಿಗಳಿಗೆ ತೊಂದರೆಯನ್ನು ಉಂಟುಮಾಡಿದ್ದಾರೆ. ಮತ್ತೆ ಬಹುತೇಕರಿಗೆ ಏನು ಗಾಯಗಳಾಗಿವೆ, ಮಾರಣಾಂತಿಕ ಹಲ್ಲೆಯನ್ನು ಮಾಡಿದ್ದಾರೆ ಇದೆಲ್ಲವನ್ನೂ ಆರಿತು ಬೆಳಿಗ್ಗೆ 9 ಗಂಟೆಗೆ ನಾನು ಅಡಿಶನಲ್ ಕಮೀಷನರ್ ಅವರನ್ನು ಜಾಯಿಂಟ್ ಕಮೀಷನರ್ ಅವರನ್ನು ದೂರವಾಣಿ ಮೂಲಕ ಮಾತನಾಡಿ ನಂತರ ನಾನೇ ಸ್ವತಃ ಆ ಭಾಗದ ಚುನಾಯಿತ ನಗರಪಾಲಿಕೆ ಸದಸ್ಯರನ್ನು, ಸೋತವರನ್ನು ಮತ್ತು ಗೆದ್ದವರನ್ನು ಎಲ್ಲರನ್ನೂ ಜತೆಗೆ ಸೇರಿಸಿಕೊಂಡು ಮೀಟಿಂಗ್ ಮಾಡಿ ಎಲ್ಲರೂ ಕೂಡ ಪರಿಸ್ಥಿತಿ ತಿಳಿಯಾಗಿದೆ ಎನ್ನುವ ದೃಷ್ಟಿಯನ್ನು ಇಟ್ಟುಕೊಂಡು ಅಲ್ಲಿದ್ದಂಥ ಬಹುತೇಕ ಮುಖಂಡರುಗಳು ನಾವು ಕೆಳೆಗಡೆ ಒಂದು ರೌಂಡ್‌ಹಾಕಿ ಎಲ್ಲರಿಗೂ ಕೂಡ ಮನವಿ ಮಾಡೋಣ ಎಂದು ಹೇಳಿದಾಗ ನಾವೆಲ್ಲರೂ ಹೋಗಿಬರುವ ಸಂದರ್ಭದಲ್ಲಿ 9 ಮತ್ತು 10ನೇ ಮುಖ್ಯರಸ್ತೆಯಲ್ಲಿರುವ ಕೆಲವು ಗಲ್ಲಿಗಳಿಗೆ ಹೋದಾಗ ಕೆಲವು ಕಡುಬಡವರು ಮತ್ತು ಏನೂ ಕೂಡ ಗೊತ್ತಿಲ್ಲದೇ ಇರತಕ್ಕಂಥ ಜನರು ಮತ್ತು ಬಹುತೇಕ ಮನೆಗಳನ್ನು ನೋಡಿಕೊಂಡು ಬಂದಾಗ ಸುಮಾರು ಒಂದು-ಒಂದೂವರೆ ಗಂಟೆಯಲ್ಲಿ ಒಂದೇ ಒಂದು ಕಹಿ ಘಟನೆ ಕೂಡ ಅಲ್ಲಿ ಆಗಿಲ್ಲ. ಒಬ್ಬರೂ ಕೂಡ ಅದರ ಬಗ್ಗೆ ಚಕಾರವೆತ್ತಿಲ್ಲ. ಆದರೆ ಇವೆಲ್ಲಾ ಮುಗಿಸಿ ಮತ್ತೊಂದು ನರಸಿಂಹಯ್ಯ ಕಾಪೌಂಡಿಗೆ ಹೋಗತಕ್ಕಂಥ ವ್ಯವಸ್ಥೆಯಲ್ಲಿ ಎಲ್ಲರನ್ನೂ ಸೇರಿಸಿ ಸಣ್ಣವಾದ ಸಭೆ ಮಾಡಿ ಹೊರಡಬೇಕಾದರೆ ಇದ್ದಕ್ಕಿದ್ದಂತೆ ಮೂರ್ನಾಲ್ಕು ಜನ ತಮ್ಮ ಬೇಳೆ ಬೇಯಿಸಿ ಕೊಳ್ಳುವ ಸಲುವಾಗಿ ಮಹಡಿ ಮೇಲುಗಡೆಯಿಂದ ಸೋಡಾ ಬಾಟಲ್‌ಗಳನ್ನು ಕಲ್ಲುಗಳನ್ನು ಎಸೆದಿದ್ದರಿಂದ 10-15 ನಿಮಿಷಗಳ ಕಾಲ ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾಗಲು ಕಾರಣವಾಯಿತು. ತಕ್ಷಣವೇ ಪೊಲೀಸ್‌ನವರು ಮುಂಜಾಗ್ರತಾ ಕ್ರಮವನ್ನು ವಹಿಸಿ ಆಗಬೇಕಾಗಿದ್ದ ಅನಾಹುತವನ್ನು ತಪ್ಪಿಸಿದರೂ, ಇಷ್ಟೆಲ್ಲಾ ಆಗುತ್ತಿದ್ದದ್ದು ಒಂದು ಕಡೆಯಾಗಿದ್ದರೆ, ಇದಾದ ಮೇಲೆ ಪ್ರತಿಯೊಂದು ತಿಳಿಯಾಗಿ ನಾವೆಲ್ಲಾ ಮನೆಗೆ ಬಂದ ಮೇಲೆ ಎಂದೂ ಕೂಡ ಆಗದಿದ್ದ ಘಟನೆ ಪಾದರಾಯನ ಪುರದ 7ನೇ ಮುಖ್ಯ ರಸ್ತೆಯಲ್ಲಾಯಿತು. ಪಾದರಾಯನಪುರದ ಮೂಲ ಕರ್ತವ್ಯ ನಾಗರಾಜ್ ಎನ್ನತಕ್ಕವರ್ಯಾರು ಈಗ ಸಾವನಪ್ಪಿದ್ದಾರೆ ಅವರಿರಬಹುದು, ಅವರ ಕುಟುಂಬವಿರಬಹುದು, ಅವರ

ತಂದೆಯಾಗಿರತಕ್ಕಂಥ ರಾಮಯ್ಯನವರು, ರಾಮಯ್ಯನವರ ಜೊತೆಯಲ್ಲಿ ಹುಟ್ಟಿದಂಥ ನಂಜುಂಡಪ್ಪನವರು, ಚಿನ್ನಪ್ಪನವರು, ಲಕ್ಷ್ಮ್ಯಯ್ಯನವರು, ಇವರದೊಂದು ದೊಡ್ಡ ಫ್ಯಾಮಿಲಿ. ಪಾದರಾಯನಪುರ ಊರಿದೆ ಅದರ ಜಮೀನು, ಮತ್ತು ಅಲ್ಲಿ ಊರಿನ ದೇವಸ್ಥಾನವಿದೆ, ಅಲ್ಲಿನ 7ನೇ ಮುಖ್ಯ ರಸ್ತೆಯಲ್ಲಿ ಯಾವುದೇ ಕಾರಣಕ್ಕೂ ಎಂಥ ಘಟನೆಗಳಾಗಿದ್ದರೂ, ಅಲ್ಲಿ ಏನೂ ಆಗದಿದ್ದ ರಸ್ತೆಯಲ್ಲಿ ಸುಮಾರು ಐವತ್ತು ಆರವತ್ತು ಜನರ ಗುಂಪು ಹೋಗಿ ಆ ಮನೆಯನ್ನೇ ಉದ್ದೇಶವಾಗಿ ಇಟ್ಟು ಕೊಂಡು ಅವರು ಬಾಗಿಲು ಹಾಕಿಕೊಂಡಿದ್ದರೂ ಕೂಡ ಅದನ್ನು ಒಡೆಯುತ್ತಿದ್ದ ಕೆಲಸ ಮಾಡುತ್ತಿದ್ದಾಗ, ಈತ ದೇವಸ್ಥಾನದಲ್ಲಿದ್ದರು ಅಲ್ಲಿಗೆ ಬಂದರೆ ಆತನನ್ನು ಹೊಡೆದು ಕೊನೆಗೆ ಆತ ಹಲ್ಲಿಗೆ ಒಳಗಾಗಿ ಅವರು ಮೊನ್ನೆ ದಿವಸ ಸಾವನ್ನು ಅಪ್ಪಿದ್ದಾರೆ. ಯಾವ ಪ್ರದೇಶದಲ್ಲಿ ಈ ಗಲಭೆಯಾಗುತ್ತಿತ್ತೋ ಅಲ್ಲಿ ಈ ಮೊದಲು ಯಾವಾಗಲೂ ಗಲಾಟೆಯಾಗಿರಲಿಲ್ಲ. ಯಾವುದಕ್ಕೋಸ್ಕರ ಈ ಬಂದು ಉದ್ದೇಶಪೂರ್ವಕವಾಗಿ ಇದನ್ನು ಮಾಡತಕ್ಕಂಥ ವ್ಯವಸ್ಥಿತವಾದಂಥ ಯಾರು ವ್ಯಕ್ತಿಗಳಿದ್ದಾರೆ, ಯಾರು ಇದನ್ನು ಮಾಡತಕ್ಕದ್ದಕ್ಕೆ ಕಾರಣಕರ್ತರಿದ್ದಾರೆ ಅವರು ಇವತ್ತು ಅಮಾಯಕರನ್ನು, ತುಳಿತಕ್ಕೆ ಒಳಪಟ್ಟಂಥವರನ್ನು, ಬಡವರನ್ನು ಮತ್ತು ಎಲ್ಲೋ ಒಂದು ಕಡೆ ತಮ್ಮ ಜೀವನ ಸಾಗಿಸುತ್ತಿರತಕ್ಕಂಥ ಜನರಿಗೆ ತೊಂದರೆ ಮಾಡಿ ಸುಮಾರು 15-20 ಕೇಸುಗಳಾಗಿರಬಹುದು. ಅದಲ್ಲದೆ ನೂರಾರು ಜನರಿಗೆ ಪೆಟ್ಟಾಗಿದೆ. ಸಣ್ಣ ಪುಟ್ಟ ಪೆಟ್ಟನ್ನು ತಿಂದವರು ಆಸ್ಪತ್ರೆಗೆ ಹೋಗಿ ಚಿಕಿತ್ಸೆಯನ್ನು ಪಡೆದುಕೊಂಡು ಹೋಗಿದ್ದಾರೆ. ನನ್ನ ಉದ್ದೇಶವಾದರೂ ಇಷ್ಟೇ. ನನ್ನ ಭಾವನೆಯಾದರೂ ಇಷ್ಟೇ, ಸರ್ಕಾರವನ್ನು ನಾನು ಟೀಕಿಸಬೇಕೆನ್ನುವುದಾಗಲಿ, ಮತ್ತೆ ಪೊಲೀಸಿನವರು ಕೈಗೊಂಡ ಕೆಲಸವನ್ನು ಇಲ್ಲ ಎಂದು ಹೇಳುವಂತಾದ್ದಾಗಲಿ ಅಲ್ಲ. ನಾನೂ ಕೂಡ ಈ ಘಟನೆಯನ್ನು ಪ್ರತ್ಯೇಕವಾಗಿ ನೋಡಿರತಕ್ಕಂಥವನು 1983ರಿಂದ ಆ ಕ್ಷೇತ್ರದ ಆಗು ಹೋಗುಗಳನ್ನು ಬಲ್ಲವನ್ನಾಗಿದ್ದೇನೆ. 1997ನೇ ಇಸವಿಯಲ್ಲಿ ಒಂದು ಸಣ್ಣ ಘಟನೆಗೋಸ್ಕರ ಸುಮಾರು 15-16 ಜನ ಸಾವನ್ನಪ್ಪಿದರು. ಅದರೆ ಈ ಸಾರಿ ಯಾವುದೇ ಉದ್ದೇಶವಿಲ್ಲದೆ ಎಲ್ಲೋ ಒಂದು ಕಡೆ ಗಾಳಿ ಸುದ್ದಿಗಳನ್ನು ಹರಡಿಸಿ ಇಡೀ ರಾಷ್ಟ್ರ ಇವತ್ತು ನೆಮ್ಮದಿಯಿಂದ ಇರಬೇಕಾದರೆ ಜಗಜೀವನರಾಂ ನಗರದಂತಹ, ಬಡವರು ವಾಸ ಮಾಡತಕ್ಕಂಥ ಪಾದರಾಯನಪುರದಂತಹ ಪ್ರದೇಶದಲ್ಲಿ ಇಂತಹ ಪ್ರಕ್ಷುಬ್ಧ ವಾತಾವರಣವನ್ನು ಸೃಷ್ಟಿ ಮಾಡುವುದಕ್ಕೆ ಯಾರು ಕಾರಣಕರ್ತರು ಎನ್ನುವುದನ್ನು ಕಂಡುಹಿಡಿಯಲು ಸರ್ಕಾರ ಅದರ ಬಗ್ಗೆ ಹೆಚ್ಚಿನ ಗಮನವನ್ನು ಹರಿಸಬೇಕಾಗಿದೆ. ನಾನಾದರೂ ತಮ್ಮ ಮೂಲಕ ಸರ್ಕಾರವನ್ನು ಗೃಹ ಸಚಿವರನ್ನು ವಿನಂತಿ ಮಾಡುವುದು ಇಷ್ಟೇ, ಇದನ್ನು ನಾನು ಹೆಚ್ಚಿಗೆ ಹೇಳಲು ಹೋಗುವುದಿಲ್ಲ. ಇವತ್ತು ಏನಾಗಿದೆ ಎಂದರೆ, ಇದಕ್ಕಿಂತ ಹೆಚ್ಚಾಗಿ ಅಲ್ಲಿ ವಾಸ ಮಾಡತಕ್ಕಂಥವರು ಬಡವರು, ಮಧ್ಯಮ ವರ್ಗದವರು ಅಲ್ಪಸಂಖ್ಯಾತರು, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮತ್ತು ಹಿಂದುಳಿದ ವರ್ಗದ ಜನ ಅಲ್ಲಿ ವಾಸ ಮಾಡತಕ್ಕಂಥಾದ್ದು, 10 ವರ್ಷಗಳಿಂದ ಒಂದೇ ಒಂದು ಸಣ್ಣ ಘಟನೆ ನಡೆಯದೇ ಇರತಕ್ಕಂಥಾ ಆ ಪ್ರದೇಶದಲ್ಲಿ ಇದನ್ನು ವ್ಯವಸ್ಥಿತವಾಗಿ ಮಾಡಿದಂತಹವರನ್ನು ಮಾಡತಕ್ಕಂಥದಕ್ಕೆ ಕಾರಣ ಭೂತರಾದವರನ್ನು ಎಲ್ಲೋ ಒಂದು ಕಡೆ ಬಗ್ಗು ಬಡಿಯಲಿಲ್ಲವೆಂದರೆ ಗೊತ್ತಿಲ್ಲದೇ ಇರತಕ್ಕಂಥವರು, ಅಮಾಯಕರು ಬಹುತೇಕವಾಗಿ ಇದಕ್ಕೆ ಬಲಿಯಾಗುತ್ತಿದ್ದಾರೆ. ಈ ಬಲಿಯನ್ನು ತಪ್ಪಿಸಬೇಕಾದರೆ ಈ ಕ್ರಮ ಕೈಗೊಳ್ಳಲೇಬೇಕು. ಅಲ್ಲಿ ಶ್ರೀ ನಾಗರಾಜ್ ಎನ್ನತಕ್ಕಂಥ ಒಬ್ಬ ವ್ಯಕ್ತಿ ಬಿ.ಇ.ಎಲ್.ನಲ್ಲಿ ಕೆಲಸ ಮಾಡುತ್ತಿದ್ದರು, ಅವರು ವಿ.ಆರ್ ಅನ್ನು ತೆಗೆದುಕೊಂಡು ಬಂದಂತಹ ಹಣದಲ್ಲಿ,

ಮೂರು ಜನ ಹೆಣ್ಣು ಮಕ್ಕಳು ಒಬ್ಬ ಮಗ ಇದ್ದಾನೆ. ಅದರಲ್ಲಿ ಇಬ್ಬರು ಹೆಣ್ಣು ಮಕ್ಕಳ ಮದುವೆ ಮಾಡಿದ್ದಾರೆ. ಇನ್ನೂ ಒಬ್ಬ ಹೆಣ್ಣು ಮಗವನ್ನು ಮದುವೆ ಮಾಡಬೇಕು ಮತ್ತು ಮಗ ಇದ್ದಾನೆ. ಅವರು ಒಂದು ಕಾರನ್ನು ಓಡಿಸಿಕೊಂಡು ಜೀವನ ಮಾಡುತ್ತಿದ್ದಂತಹ ವ್ಯಕ್ತಿ ಅವರ ತಾತ ಮುತ್ತಾತನ ಕಾಲದಿಂದಲ್ಲೂ ಪಾದರಾಯನಪುರ ದೇವಸ್ಥಾನದಲ್ಲಿ ಪೂಜೆ ಮಾಡಿಕೊಂಡು ಜೀವನ ಸಾಗಿಸುತ್ತಿದ್ದವರು. ಅವರಿಗೆ ಯಾರೋ ಕೆಲವರು ಕಿಡಿಗೇಡಿಗಳು ಬಂದು ನಿಮ್ಮ ಮನೆ ಒಡೆಯುತ್ತಿದ್ದಾರೆ ಎಂದು ಹೇಳಿದಾಗ ಅವರು ಓಡಿ ಬಂದರೆ ಅವರನ್ನು ಹೀನಾಯವಾಗಿ, ಮನುಷ್ಯತ್ವ ಇಲ್ಲದೇ ಆತನ ತಲೆಗೆ, ಹೊಟ್ಟೆಗೆ, ಬೆನ್ನಿಗೆ ಚಾಕು ಹಾಕಿ ಸಾಯಿಸಿರತಕ್ಕಂಥ ಘಟನೆ ಯಾರಾದರೂ ಮನುಷ್ಯತ್ವ ಇರತಕ್ಕಂಥವರು ನೋಡಿದರೆ ಕರಳು ಕಿತ್ತು ಬರುತ್ತದೆ. ಅವರ ಇಡೀ ಕುಟುಂಬ ಇವತ್ತು ಅನಾಥವಾಗಿದೆ. ನಾನು 1983ರಿಂದಲು ಆ ಭಾಗದಲ್ಲಿ ಇದ್ದರೂ ಕೂಡ ಸುಮಾರು 8 ವರ್ಷಗಳಿಂದ ನಾನು ಆ ಕ್ಷೇತ್ರವನ್ನು ಪ್ರತಿನಿಧಿಸುತ್ತಿದ್ದೇನೆ. ಅಲ್ಲಿ ಹಿಂದೂಗಳು ಆಗಲಿ, ಮುಸಲ್ಮಾನರು ಆಗಲಿ / ಕ್ರಿಶ್ಚಿಯನ್ನರು ಆಗಲಿ ಎಲ್ಲರೂ ಒಂದು ತಾಯಿಯ ಮಕ್ಕಳಾಗಿ ಜೀವನ ಸಾಗಿಸುತ್ತಿದ್ದಾರೆ. ಯಾವುದೇ ಒಂದು ಉದ್ದೇಶವಿಲ್ಲದೇ ನಿರ್ದಿಷ್ಟವಾದ, ನಿಖರವಾದ ವಿಚಾರಗಳು ಇಲ್ಲದೇ ಅವರನ್ನು ದಾರಿ ತಪ್ಪಿಸುವಂತಹ ಕೆಲಸ ಮಾಡಿ ಕೇವಲ ಒಂದು ವರ್ಗದವರಿಗೆ ಅನಾನುಕೂಲವನ್ನು ಮಾಡತಕ್ಕಂಥಾದ್ದಕ್ಕೆ ಯಾರ್ಯಾರು ಎಷ್ಟೆಷ್ಟು ಕಾರಣಕರ್ತರು ಎನ್ನುವುದು ತನಿಖೆಯಿಂದ ಗೊತ್ತಾಗಬೇಕಾಗುತ್ತದೆ. ಇದು ಆಗದೇ ಹೋದರೆ ಎಲ್ಲೋ ಒಂದು ಕಡೆ ಆ ಬಡವರು ವಾಸ ಮಾಡುವುದು ಕಷ್ಟವಾಗುತ್ತದೆ. ನಿನ್ನೆ ರಾತ್ರಿಯಿಂದ ಮಾನ್ಯ ಗೃಹ ಸಚಿವರು ಕರ್ಫ್ಯೂವನ್ನು ತೆಗೆದಿದ್ದಾರೆ. ನಾನು ಅವರ ಇಲಾಖೆಯ ಮುಖ್ಯಸ್ಥರನ್ನು ಮತ್ತು ಸಂಬಂಧಪಟ್ಟ ಅಧಿಕಾರಿಗಳನ್ನು ಅಭಿನಂದಿಸುತ್ತೇನೆ. ಅವರ ಸಮಯ ಪ್ರಜ್ಞೆ ಮತ್ತು ಕರ್ತವ್ಯ ಸರಿಯಾಗಿ ಮಾಡದೇ ಇದ್ದಿದ್ದರೆ ಸುಮಾರು ಜನ ಸಾವನ್ನಪ್ಪುತ್ತಿದ್ದರು. ಇದೇ ರೀತಿ ನಡೆದಂತಹ 1992ರ ಘಟನೆ ಮತ್ತೆ ಒಂದು ಕಡೆ ಮರುಕಳಿಸುತ್ತಿತ್ತು. ಈ ಘಟನೆ ಮರುಕಳಿಸಬಾರದು ಅಂದರೆ ಇಂತಹ ಕಿಡಿಗೇಡಿಗಳು ಯಾರು ಇದ್ದಾರೆ ಈ ಕಿಡಿಗೇಡಿಗಳಿಗೆ ಸರಿಯಾದ ಪಾಠವನ್ನು ಕಲಿಸದೇ ಹೋದರೆ ಕಷ್ಟವಾಗುತ್ತದೆ. ಶ್ರೀ ನಾಗರಾಜು ಅವರ ಕುಟುಂಬ ಇವತ್ತು ಅನಾಥವಾಗಿದೆ. ಅವರ ಕುಟುಂಬಕ್ಕೆ ಬೇರೆ ಯಾವುದೇ ದಾರಿ ಇಲ್ಲ. ನಾನು ಸರ್ಕಾರದಲ್ಲಿ ಮತ್ತು ಮಾನ್ಯ ಗೃಹ ಸಚಿವರಲ್ಲಿ ಮನವಿ ಮಾಡುತ್ತೇನೆ. ಅವರಿಗೆ ಇನ್ನೂ ಒಬ್ಬ ಮಗಳು ಮದುವೆಯಾಗುವವಳು ಇದ್ದಾಳೆ. 20 ವರ್ಷದ ಮಗ ಇದ್ದಾನೆ. ಅವರ ಕುಟುಂಬ ಜೀವನ ಮಾಡುವುದಕ್ಕೆ ಕಷ್ಟವಾಗಿದೆ. ದಯಮಾಡಿ ಅವರ ಮಗನಿಗೆ ಒಂದು ಉದ್ಯೋಗ ಕೊಟ್ಟರೆ ಒಳ್ಳೆಯದು. ನಾನು ಪರಿಹಾರ ಕೊಡಿ ಎಂದು ಕೇಳುವುದಿಲ್ಲ. ಕಳೆದಸಲ ಮಾನ್ಯ ಸಿದ್ಧಾರವರು ಗೃಹ ಸಚಿವರಾಗಿದ್ದಾಗ ಇಂತಹ ಘಟನೆಗಳಲ್ಲಿ ಪರಿಹಾರ ಕೇಳಿ ಕೇಳಿ ಕೊನೆಗೆ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಒಂದಿಷ್ಟು ಹಣ ಕೊಡಿಸುವಂತಹ ಸಂದರ್ಭ ಬಂತು. ಆದರೆ ನಾನು ನಿಮ್ಮಲ್ಲಿ ವಿನಂತಿ ಮಾಡುತ್ತೇನೆ. ಎಲ್ಲೋ ಒಂದು ಕಡೆ ಅನಾಥವಾಗಿರತಕ್ಕಂಥ ಬಡ ಕುಟುಂಬಕ್ಕೆ ನಾವು ಸಹಾಯ ಹಸ್ತವನ್ನು ನೀಡಬೇಕಾಗುತ್ತದೆ. ಅದನ್ನು ದಯಮಾಡಿ ಸರ್ಕಾರ ಮಾಡಬೇಕೆನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಿ, ಆ ಜಗಜೀವನರಾಮ ನಗರ, ಪಾದರಾಯನಪುರ, ಹೊನ್ನಿನಪುರ, ಜನತಾ ಕಾಲೋನಿ, ಹಳೇ ಗುಡ್ಡದಹಳ್ಳಿ, ಹೊಸ ಗುಡ್ಡದಹಳ್ಳಿ ಫಾರುಕಿ ನಗರ, ಪಾದರಾಯನಪುರ, ವೆಸ್ಟ್ ಆಫ್ ಪಾದರಾಯನಪುರ ವೆಂಕಟಸ್ವಾಮಿ ಗಾರ್ಡನ್, ನರಸಿಂಹಯ್ಯ ಕಾಂಪೌಂಡ್, ರಾಯನಪುರ, ರಂಗನಾಥ್ ಕಾಲೋನಿ, ಹೋಬೈಸ್ ಕಾಲೋನಿ.

ಇದು ಒಂದು ದೊಡ್ಡ ಸೂಕ್ಷ್ಮವಾದ ಪ್ರದೇಶ. ಒಂದು ಸಣ್ಣ ಘಟನೆಯಾದರೂ ಕೂಡ ಅದನ್ನು ದೊಡ್ಡದಾಗಿ ತೆಗೆದುಕೊಂಡು, ಕೊನೆಗೆ ಏನೂ ಸಿಗಲಿಲ್ಲವೆಂದರೆ ಜಾತಿಯ ಲೇಪವನ್ನು ಹಚ್ಚತಕ್ಕಂಥ ಕೆಲಸ ಸುಮಾರು ವರ್ಷ ನಡೆದಿತ್ತು. 1992ರಿಂದ ಆ ಕೆಲಸಕ್ಕೆ ಎಲ್ಲೋ ಒಂದು ಕಡೆ ಕಡಿವಾಣ ಹಾಕಿತ್ತು. ಅದು ಮತ್ತೊಮ್ಮೆ ಇವತ್ತು ಮರುಕಳಿಸಿದೆ. ಇದು ಮರುಕಳಿಸದ ಹಾಗೆ ಸರ್ಕಾರ ಕಠಿಣವಾದ ಕ್ರಮ ತೆಗೆದುಕೊಳ್ಳುವುದರ ಜೊತೆಗೆ ಪೊಲೀಸ್ ಠಾಣೆಯಲ್ಲಿ ಸಿಬ್ಬಂದಿ ಇರುವುದು ಕೇವಲ 35-36. ನಾನು ಹೋದ ಸರ್ಕಾರದಲ್ಲಿಯು ಮನವಿ ಮಾಡಿದ್ದೆ. ಈ ಸರ್ಕಾರಕ್ಕೂ ಕೂಡ ಮನವಿ ಮಾಡುತ್ತೇನೆ. ಅಲ್ಲಿ ವಾರ್ಡ್ ಆಫೀಸ್‌ನಲ್ಲಿ ಒಂದು ಪೊಲೀಸ್ ಠಾಣೆ ಇದೆ. ಆ ಪೊಲೀಸ್ ಠಾಣೆಯಲ್ಲಿ ಸರಿಯಾಗಿ ಸುಮಾರು 50-60 ಜನ ನೂಕಾಡಿದರೆ ಆ ಪೊಲೀಸ್ ಠಾಣೆಯಲ್ಲಿ ಕುಳಿತುಕೊಳ್ಳುವುದಕ್ಕೂ ಸರಿಯಾಗಿ ಜಾಗ ಇಲ್ಲದೇ ಇರತಕ್ಕಂಥಾದ್ದು ಸನ್ಮಾನ್ಯ ಗೃಹ ಸಚಿವರು ಈ ಸಲ ಬಜೆಟ್‌ನಲ್ಲಿ ಅದಕ್ಕೆ ಬೇಕಾಗುವ ಹಣ ಸೇರಿಸುವ ಉದ್ದೇಶವನ್ನೂ ಸಹ ಇಟ್ಟುಕೊಂಡಿದ್ದಾರೆಂದು ಕಾಣಿಸುತ್ತದೆ. ದಯಮಾಡಿ ಅಲ್ಲಿ ತಕ್ಷಣಕ್ಕೆ 30-40 ಜನ ಪೊಲೀಸಿನವರನ್ನು ಮತ್ತು ಇನ್ನಿತರ ಸಿಬ್ಬಂದಿಗಳನ್ನು ಹಾಕತಕ್ಕಂಥಾದ್ದು ಆಗಬೇಕು. ಈ ಸೂಕ್ಷ್ಮವಾದ ಪ್ರದೇಶದಲ್ಲಿ ಒಂದು ಹೊಯ್ಸಳ ಇದೆ. ಮೂಲಭೂತವಾಗಿ 1964ರಲ್ಲಿ ಆ ಪ್ರದೇಶಗಳು ನಮಗೆ ಬಂದಿದ್ದರೂ ಕೂಡ ಕೆಲವಾರು ಸವಲತ್ತುಗಳನ್ನು 7-8- ವರ್ಷಗಳಿಂದೀಚೆಗೆ ಮಾತ್ರ ನಾವು ಕೊಡುತ್ತಿದ್ದೇವೆ. ಪೂರ್ತಿ ಎಲ್ಲ ಸೌಲಭ್ಯಗಳನ್ನು ಕೊಡುವುದಕ್ಕೆ ನಮ್ಮ ಕೈಯಲ್ಲಿ ಸಾಧ್ಯವಾಗಲಿಲ್ಲ. ಆದ್ದರಿಂದ ನಾನು ತಮ್ಮಲ್ಲಿ ವಿನಂತಿ ಮಾಡುವುದು ಇಷ್ಟೇ. ಅಂತಹ ಸೂಕ್ಷ್ಮವಾದ ಪ್ರದೇಶಗಳು ಏನು ಇವೆ, ಅಲ್ಲಿ ಸರಿಯಾದ ಕಾನೂನು ಮತ್ತು ಸುವ್ಯವಸ್ಥೆಯನ್ನು ಕಾಪಾಡದೇ ಹೋದರೆ ಬಡವರು, ಅಮಾಯಕರು ತುಳಿತಕ್ಕೆ ಒಳಪಟ್ಟಂತಹವರು ಕಷ್ಟವನ್ನು ಅನುಭವಿಸಬೇಕಾಗುತ್ತದೆ. ಎಲ್ಲಿಂದಲೋ ಬಂದು ಎಲ್ಲೋ ಹೋಗತಕ್ಕಂಥವರು ಯಾರೋ ಒಬ್ಬ ಆಟೋ ರಿಕ್ಷಾ ಡ್ರೈವರ್, ನಾರಾಯಣಪ್ಪ ಎಂದು ಅವನು ಅಲ್ಲಿದ್ದಂತಹ ಸಿಬ್ಬಂದಿ ಯಾರನ್ನೋ ಕರೆದುಕೊಂಡು ಬಂದು, ವಾಪಸ್ ಹೋಗಬೇಕಾದರೆ, ಅವನ ಮೇಲೆ ಹಲ್ಲೆ ಮಾಡಿದ್ದಾರೆ, ಅವನ ಆಟೋರಿಕ್ಷಾವನ್ನು ಸುಟ್ಟು ಹಾಕಿದ್ದಾರೆ. ಇಂತಹ ಹತ್ತಾರು ಘಟನೆಗಳು ನಡೆದಿವೆ. ಕೇವಲ ನಾರಾಯಣಪ್ಪ ಒಬ್ಬರೇ ಅಲ್ಲ, ಪ್ರಭಾಕರ್ ಒಬ್ಬರೇ ಅಲ್ಲ, ಮಂಜುಳಮ್ಮ ಎನ್ನತಕ್ಕಂಥವರು, ಶ್ರೀಮತಿ ಆಸಾಬಿ ಕೋಂ ಖಾಸಿಂಖಾನ್‌ನವರು, ಆನಂದ ಬಿನ್ ಭಾಸ್ಕರ ಎನ್ನತಕ್ಕಂಥವರು, ಮುನಿಯಪ್ಪ ಎನ್ನತಕ್ಕಂಥವರು, ಅಂದಾನಯ್ಯ ಎಂಬುವರು, ಇಂಥವರು ಅನೇಕರು ದೂರುಗಳನ್ನು ನೀಡಿದ್ದರೂ ಕೂಡ, ಎಲ್ಲಾ ದೂರುಗಳನ್ನು ಪೊಲೀಸಿನವರು ಸ್ವೀಕಾರ ಮಾಡಿ ಕೇಸನ್ನು ರಿಜಿಸ್ಟರು ಮಾಡಿದ್ದರೂ ಕೂಡ, ಇದು ಎಷ್ಟು ದಿನ ನಾವು ಪೊಲೀಸಿನವರನ್ನು ಇಟ್ಟುಕೊಂಡು, ಆ ಭಾಗದ ಜನರನ್ನು ರಕ್ಷಣೆ ಮಾಡುವುದು ಕಷ್ಟ ಸಾಧ್ಯವಾಗುತ್ತದೆ. ಒಬ್ಬರ ಮನಸ್ಸನ್ನು ಮತ್ತೊಬ್ಬರು ಅರಿತುಕೊಳ್ಳತಕ್ಕಂಥ ಭಾವನೆಯಿಂದ 10 ವರ್ಷಗಳಿಂದ ಇಂತಹ ಒಂದೇ ಒಂದು ಸಣ್ಣ ಕೋಮು ದಳ್ಳುರಿಗಳು ನಡೆಯದೇ ಇರತಕ್ಕಂಥಾದ್ದನ್ನು, ಕೆಲವು ತಿಳಿಗೇಡಿಗಳು ಅರಿತುಕೊಂಡೊ ಏನೋ ಗೊತ್ತಿಲ್ಲ, ಉದ್ದೇಶಪೂರ್ವಕವಾಗಿ ಇದನ್ನು ಮಾಡಿದ್ದಾರೆಂಬ ಮಾತನ್ನು ಇವತ್ತುನೊಂದು ಈ ಸಂದರ್ಭದಲ್ಲಿ ಹೇಳುತ್ತಾ ಇದ್ದೇನೆ. ನಾನು ತಮ್ಮ ಮೂಲಕ ಸರ್ಕಾರವನ್ನು ವಿನಂತಿ ಮಾಡುವುದು ಇಷ್ಟೆ : ಆಗ್ರಹಪಡಿಸತಕ್ಕಂಥಾದ್ದು ಇಷ್ಟೆ. ಇವತ್ತು ಬೆಳಿಗ್ಗೆ ಪೊಲೀಸ್ ಆಯುಕ್ತರು ಒಂದು ಹೇಳಿಕೆ ನೀಡಿದ್ದಾರೆ. ಸನ್ಮಾನ್ಯ ಸಾಂಗ್ಲಿಯಾನವರು ಸ್ಥಳಕ್ಕೆ ಹೋಗಿ, ಜನರನ್ನು ಕೂಡ ಸಾಂತ್ವನ ಮಾಡಿ, ಯಾರೂ ಕೂಡ ಭಯಭೀತ ರಾಗಕೂಡದು

ಎಂಬ ದೃಷ್ಟಿಯನ್ನು ಇಟ್ಟುಕೊಂಡು ಹೇಳಿದ್ದಾರೆ. ಒಬ್ಬ ಎ.ಸಿ.ಪಿ ಯವರಿಂದ ಇದನ್ನು ತನಿಖೆ ಮಾಡಿಸುತ್ತೇನೆಂಬ ಮಾತನ್ನು ಹೇಳಿದ್ದಾರೆ. 4 ದಿನಗಳಿಂದ ಸತತವಾಗಿ ಗೃಹ ಸಚಿವರು, ನಾವು ಹೇಳಿದಂತಹ ಎಲ್ಲಾ ಸಲಪೆಗಳನ್ನೂ ಕೂಡ ಸ್ವೀಕಾರ ಮಾಡಿ, ಅಲ್ಲಿ ಬೇಕಾಗಿರತಕ್ಕಂಥ ಕಾನೂನು ಸುವ್ಯವಸ್ಥೆಯನ್ನು ಕಾಪಾಡತಕ್ಕಂಥಾದ್ದಕ್ಕೆ ಅವಕಾಶವನ್ನು ಕಲ್ಪಿಸಿದ್ದಾರೆ. ಒಬ್ಬ ಎ.ಸಿ.ಪಿ ಯವರಿಂದ ಇದನ್ನು ಎನ್‌ಕ್ವೈರಿ ಮಾಡುವುದರಿಂದ ಸತ್ಯಾಂಶ ಹೊರಬೀಳುತ್ತದೆ ಎಂಬ ಭಾವನೆ ನನಗಾದರೂ ಇಲ್ಲ. ನಾನಾದರೂ ವಿನಂತಿ ಮಾಡುತ್ತೇನೆ. ಏನೂ ಕಾರಣ ಇಲ್ಲದೆ, ಯಾವುದೇ ಉದ್ದೇಶ ಇಲ್ಲದೆ, ಯಾರಿಗೋಸ್ಕರವಾಗಿ ಇಂತಹ ಒಂದು ಅಪಪ್ರಚಾರವನ್ನು ಮಾಡಿ, ಹತ್ತಾರು ಕುಟುಂಬಗಳಿಗೆ ತೊಂದರೆಯನ್ನುಂಟು ಮಾಡಿ, ಸಾವಿರಾರು ರೂಪಾಯಿಗಳನ್ನು ಆಸ್ತಿಪಾಸ್ತಿಗಳನ್ನು ಹಾಳು ಮಾಡಿ, ಒಬ್ಬನ ಪ್ರಾಣವನ್ನು ತೆಗೆಯತಕ್ಕಂಥಾದ್ದಕ್ಕೆ ಕಾರಣೀಭೂತರಾದಂಥ, ಇಂತಹ ಕೃತ್ಯವನ್ನು ಎಸಗಿದಂತಹ ದುಷ್ಕರ್ಮಿಗಳು ಯಾರಿದ್ದಾರೆ. ಇವರನ್ನು ನಾವು ಗುರುತಿಸಲೇಬೇಕಾಗುತ್ತದೆ. ಇದಕ್ಕೆ ಯಾವುದೇ ರಾಜಕಾರಣದ ಲೇಪವನ್ನು ಹಚ್ಚತಕ್ಕಂಥ ಭಾವನೆ ನನಗೆ ಇಲ್ಲ. ನನಗೆ ಬೇಕಾಗಿರತಕ್ಕಂಥಾದ್ದು ಶಾಂತಿ. ಸುಮಾರು ಒಂದೂವರೆ, ಒಂದೂ ಮುಕ್ಕಾಲು ಗಂಟೆಗಳ ಕಾಲ, ಬೆಳಗಿನ ಜಾವ 5 ಗಂಟೆ, 6 ಗಂಟೆಗಳಲ್ಲಿ ಸುತ್ತಾಡಿದ್ದೇನೆ. 8-9 ವರ್ಷಗಳ ಕಾಲ ಆ ಭಾಗದಲ್ಲಿ ನಾನು ಒಬ್ಬಂಟಿಗನಾಗಿ ಓಡಾಡಿದ್ದೇನೆ. ಯಾವುದೇ ಒಂದು ಸಣ್ಣ ಘಟನೆಯು ಕೂಡ ನಡೆಯದೇ ಇರತಕ್ಕಂತಾದ್ದು, ಇದಕ್ಕಿದ್ದ ಹಾಗೆ ಇಂತಹ ಒಂದು ಘಟನೆ ನಡೆಯ ತಕ್ಕಂಥಾದ್ದಕ್ಕೆ ಕಾರಣ ಏನು? ಈ ಕಾರಣದ ಹಿಂದೆ ಇರತಕ್ಕಂಥ ಕೈವಾಡ ಅಥವಾ ಕೈಗಳೇನು ಎನ್ನುವುದನ್ನು ತಿಳಿಯಬೇಕು. ನಾನು ಗೃಹ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ದಯಮಾಡಿ, ಸಿ.ಒ.ಡಿ ಯಿಂದ ವಿಚಾರಣೆ ಮಾಡಲು ಇದನ್ನು ಒಪ್ಪಿಸಿ, ಇಲ್ಲವಾದರೆ ತಮ್ಮ ವ್ಯಾಪ್ತಿಯಲ್ಲಿ ಬರತಕ್ಕಂಥ ಹಿರಿಯ ಅಧಿಕಾರಿಗಳನ್ನು ನೇಮಕ ಮಾಡಿ, ಒಂದು ತಿಂಗಳಲ್ಲೇ ಇದರ ಬಗ್ಗೆ ವರದಿಯನ್ನು ತರಿಸಿ, ತಪ್ಪಿತಸ್ಥರಿಗೆ ತಾವು ಸರಿಯಾದ ಶಿಕ್ಷೆಯನ್ನು ಕೊಡದೇ ಹೋದರೆ ಕಷ್ಟವಾಗುತ್ತದೆ. ಮತ್ತೆ ಯಾವ ನಾಗರಾಜ ಎಂಬುವರು ಸಾವನ್ನಪ್ಪಿದ್ದಾರೆ, ಅವರ ಕುಟುಂಬ ಇವತ್ತು ಅನಾಥವಾಗಿದೆ. ಅವರ ಕುಟುಂಬದಲ್ಲಿ, ಅವರ ಮಗನಿಗೆ ಒಂದು ಉದ್ಯೋಗವನ್ನು ದಯಮಾಡಿ ತಾವು ಕಲ್ಪಿಸಿಕೊಡತಕ್ಕಂಥಾದ್ದು ಒಳ್ಳೆಯದು. ಈ ಮಾತನ್ನು ಹೇಳಿ, ಕೊನೆಯಲ್ಲಿ ನಾನು ಒಂದೇ ಒಂದು ಮನವಿಯನ್ನು ಮಾಧ್ಯಮದ ಸಮಿತ್ರರಿಗೆ ವಿನಂತಿ ಮಾಡುತ್ತೇನೆ. ಆ ಘಟನೆ ನಡೆದ ದಿನ, ನನ್ನ ಜೊತೆಯಲ್ಲಿ ಪ್ರಜಾವಾಣಿ ಮತ್ತು ಈ ಸಂಜೆಯವರು ಇದ್ದರು. ಇನ್ನುಳಿದಂಥವರು ಯಾರೂ ನನ್ನ ಜೊತೆಯಲ್ಲಿ ಇರಲಿಲ್ಲ. ಅವರು ಫೋಟೋಗಳನ್ನು ತೆಗೆದಿದ್ದು, ಕೊನೆಯಲ್ಲಿ ಎಲ್ಲವೂ ಮುಗಿದು, ನಾನು ಹೊರಗಡೆ ಬರಬೇಕಾದರೆ ಒಂದು ಫೋಟೋ ಹಾಕಿ, ಸೋಮಣ್ಣನವರಿಗೆ ಏಟಾಗಿಬಿಟ್ಟದೆ, ಸೋಮಣ್ಣನವರ ಮೇಲೆ ಪೆಟ್ರೋಲ್ ಬಾಂಬ್ ಹಾಕಿದರು, ಸೋಮಣ್ಣನವರಿಗೆ ಪ್ರಥಮ ಚಿಕಿತ್ಸೆಯನ್ನು ನೀಡಿದ್ದಾರೆ, ಸೋಮಣ್ಣನವರು ಆಸ್ಪತ್ರೆಗೆ ಹೋಗಿದ್ದಾರೆಂಬ ಗಾಳಿಸುದ್ದಿಯನ್ನು ಹರಡಿಸಿದ್ದಾರೆ. ದುರಂತ ನನಗೇನಾಗಿದೆ ಎಂದರೆ, ನಮ್ಮ ಮನೆಯಲ್ಲಿ ಅಡಿಗೆ ಮಾಡಿ, ಊಟ ಹಾಕುವುದು ಕಷ್ಟವಾಗಿದೆ. ನಾನು ಏತಕ್ಕಾಗಿ ಮನವಿ ಮಾಡುತ್ತೇನೆಂದರೆ, ಇವೆಲ್ಲವೂ ಕೂಡ ಸೂಕ್ಷ್ಮವಾದ ವಿಚಾರಗಳು. ನಾನೂ ಕೂಡ ಬೆಂಗಳೂರಿನಲ್ಲೇ ಇದ್ದವನು. ನನ್ನ ಮನೆಗೂ ದೂರವಾಣಿ ಇದೆ, ನನ್ನ ಸಂಪರ್ಕ ಬೆಳಿಸಬಹುದಾಗಿತ್ತು. ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಇಂತಹ ಸೂಕ್ಷ್ಮವಾದ ವಿಚಾರಗಳನ್ನು ಬರೆಯುವಂಥ ಸಂದರ್ಭದಲ್ಲಿ, ನಾನು ಒಬ್ಬ ಶಾಸಕನಾಗಿ, ಜನಪ್ರತಿನಿಧಿಯಾಗಿ ಕಳೆದ 20

ವರ್ಷಗಳಿಂದ ಆ ಭಾಗದಲ್ಲಿ ರಾತ್ರಿ 1 ಗಂಟೆ, 2 ಗಂಟೆ ಬೆಳಿಗಿನ ಜಾವದಲ್ಲೆಲ್ಲಾ ಸುತ್ತಾಡಿದಂಥವನಿಗೆ, ಆ ಭಾಗದ ಜನ ನನ್ನ ಮೇಲೆ ಒಂದು ಸಣ್ಣ ಘಟನೆ ಕೂಡ ಮಾಡಿದವರಲ್ಲ. ಮೊನ್ನೆ ನಡೆದಂಥ ನಗರ ಪಾಲಿಕೆ ಚುನಾವಣೆಯಲ್ಲಿ ಸೋತವರನ್ನು, ಗೆದ್ದವರನ್ನು ಎಲ್ಲರನ್ನೂ ಜೊತೆಯಲ್ಲಿ ಹಾಕಿಕೊಂಡು ಹೋದದ್ದರಿಂದ ಸಣ್ಣಪುಟ್ಟ ಕಹಿ ಘಟನೆ ಒಂದೂವರೆ, ಒಂದೂಮುಕ್ಕಾಲು ಗಂಟೆಯಾದಮೇಲೆ ಆಗಿದೆಯೇ ವಿನಹ, ಬೇರೆ ಏನೂ ಇಲ್ಲ. ದಯಮಾಡಿ, ಇಂಥಾದ್ದು ಆಗದ ಹಾಗೆ ಮತ್ತು ಈ ರೀತಿಯಾಗಿ ತಪ್ಪು ಕಲ್ಪನೆ ಬರದಹಾಗೆ ತಾವು ಸ್ಪಂದಿಸಬೇಕೆಂಬ ಮಾತನ್ನು ಈ ಸಂದರ್ಭದಲ್ಲಿ ಮಾಧ್ಯಮದವರಿಗೆ ವಿನಂತಿ ಮಾಡುತ್ತೇನೆ. ಸರ್ಕಾರ ವಿಶೇಷವಾಗಿ ಪೊಲೀಸ್ ಇಲಾಖೆ ಈ ಒಂದು ವಿಚಾರದಲ್ಲಿ ತನ್ನ ಕರ್ತವ್ಯವನ್ನು ಸರಿಯಾದ ಧಾಟಿಯಲ್ಲಿ ಮಾಡಿದ್ದರೂ ಕೂಡ, ಅಲ್ಲಿರತಕ್ಕಂಥ ಅಫೀಸಿನ ಅಧಿಕಾರಿಗಳು ಮತ್ತು ಸ್ಟಾ ಫ್ ಕಡಿಮೆ ಇರತಕ್ಕಂತಾದ್ದು ಮತ್ತೆ ಈ ರೀತಿ ಬರತಕ್ಕಂಥ ಗಾಳಿಸುದ್ದಿಗಳಿಗೆ ತಿಲಾಂಜಲಿಯನ್ನು ಹಾಕತಕ್ಕಂಥಾದ್ದಕ್ಕೆ, ಸರಿಯಾದ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ದಯಮಾಡಿ ಸಿ.ಒ.ಡಿ ಎನ್‌ಕ್ವೈರಿಗೆ ಕೊಡಲಿ ಇಲ್ಲವೇ ನುರಿತ ಒಬ್ಬ ಹಿರಿಯ ಅಧಿಕಾರಿಗಳಿಂದ ಎನ್‌ಕ್ವೈರಿ ಮಾಡಿಸಿ ಒಂದು ತಿಂಗಳಲ್ಲಿ ಇದಕ್ಕೆ ಸರಿಯಾದ ಕ್ರಮವನ್ನು ತೆಗೆದುಕೊಳ್ಳದೇ ಹೋದರೆ ಬೆಂಗಳೂರಿನಂಥ, ಬಡವರು ವಾಸ ಮಾಡತಕ್ಕಂಥ ಜನರಿಗೆ ಅನಾನುಕೂಲವಾಗುತ್ತದೆ. ದಯಮಾಡಿ, ಇದರ ಬಗ್ಗೆ ಸರ್ಕಾರ ಯೋಜನೆ ಮಾಡಿ, ಸರಿಯಾದ ಕ್ರಮವನ್ನು ತೆಗೆದು ಕೊಳ್ಳಬೇಕೆಂದು ನಾನು ತಮ್ಮ ಮೂಲಕ ಸರ್ಕಾರವನ್ನು ವಿನಂತಿ ಮಾಡುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :- ಸನ್ಮಾನ್ಯ ಅಧ್ಯಕ್ಷರೇ, ಶ್ರೀಮಾನ್ ಸೋಮಣ್ಣನವರು ಹೇಳಿದಂಥ ಕೆಲವು ಮಾತುಗಳನ್ನು ಮತ್ತು ಅವರು ಕೊಟ್ಟಂಥ ಕೆಲವು ಸಲಹೆಗಳನ್ನು ಕೂಡ ಸರ್ಕಾರ ಗಮನದಲ್ಲಿಟ್ಟು ಕೊಂಡಿದೆ. ಈಗಾಗಲೇ ಅನೇಕ ಕೆಲಸ ಕಾರ್ಯಗಳು ಕೂಡ, ನಮ್ಮ ಪೊಲೀಸ್ ಇಲಾಖೆವತಿಯಿಂದ ಆ ಭಾಗದಲ್ಲಿ ನಡೆದಿದೆ. ದುರ್ದೈವ ಇಡೀ ದೇಶದಲ್ಲೇ 15-3-2002ರಂದು ಏನೊಂದು ವಾತಾವರಣ ಸೃಷ್ಟಿಯಾಗಿತ್ತು, ಆ ವಾತಾವರಣದ ಹಿನ್ನೆಲೆಯಲ್ಲಿ, ಇಲ್ಲಿಯೂ ಕೂಡ ಕೆಲವು ಕಡೆ ಸಣ್ಣ ಪುಟ್ಟ ಗಲಾಟೆಗಳು ಆಗಿವೆ. ಆದರೂ ಕೂಡ ನಾನು ಬೆಂಗಳೂರಿನ ಮಹಾಜನತೆಗೆ ಮತ್ತು ವಿಶೇಷವಾಗಿ ಕರ್ನಾಟಕದ ಜನತೆಗೆ ಅಭಿನಂದಿಸುತ್ತೇನೆ. ಎಲ್ಲಾ ಪಕ್ಷದ ಮುಖಂಡರು ಮತ್ತು ವಿಶೇಷವಾಗಿ ಎನ್.ಜಿ.ಓ ಆರ್ಗನೈಸೇಷನ್ಸ್ ಕೂಡ ಸಾಕಷ್ಟು ಆಸಕ್ತಿ ವಹಿಸಿ ಕೆಲಸ ಮಾಡಿವೆ. ಅನೇಕ ಸಾಮಾಜಿಕ ಮುಖಂಡರೂ ಕೂಡ, ಕರ್ನಾಟಕದಲ್ಲಿ ಶಾಂತಿಯನ್ನು ಕಾಪಾಡಬೇಕೆಂದು ಸರ್ವ ಪ್ರಯತ್ನವನ್ನು ಮಾಡಿ, ಯಾವುದೇ ಒಂದು ಅಹಿತಕರ ಘಟನೆ ನಡೆಯದ ರೀತಿಯಲ್ಲಿ ನಮ್ಮ ಕರ್ನಾಟಕದ ಜನತೆ ಮತ್ತು ಮುಖಂಡರು ಮಾಡಿದ್ದಾರೆ. ಅದಕ್ಕಾಗಿ ನಾನು ಅವರಿಗೆ ಧನ್ಯವಾದಗಳನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಈ ಜಗಜೀವನ್‌ರಾಮ್ ನಗರದಲ್ಲಿ ನಡೆದಂಥ ಘಟನೆ ಬಗ್ಗೆ ಅವರು ಕೇಳಿದ್ದಾರೆ, ನಾನು ಕೆಲವು ವಿವರಗಳನ್ನು ಕೊಡುತ್ತೇನೆ. ದಿನಾಂಕ : 15-3-2002ರಂದು ವಿಶ್ವಹಿಂದೂ ಪರಿಷತ್‌ನವರು ಘೋಷಿಸಿದ್ದ ಶಿಲಾದಾನ್ ಕಾರ್ಯಕ್ರಮದ ಹಿನ್ನೆಲೆಯಲ್ಲಿ ಮತ್ತು ಸರ್ವೋಚ್ಚ ನ್ಯಾಯಾಲಯದ ಇತ್ತೀಚಿನ ವರದಿಯಲ್ಲಿ ಆಯೋಧ್ಯೆಯಲ್ಲಿನ ವಿವಾದಿತ ಪ್ರದೇಶದಲ್ಲಿ ಯಾವುದೇ ಧಾರ್ಮಿಕ ಚಟುವಟಿಕೆಗಳು ನಡೆಯದಂತೆ ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ, ಬೆಂಗಳೂರು ನಗರದಲ್ಲಿ ಸಂಪೂರ್ಣವಾದ ಬಂದೋಬಸ್ತ್ ವ್ಯವಸ್ಥೆಯನ್ನು ಮಾಡಲಾಗಿತ್ತು. ಬೆಂಗಳೂರು ನಗರದಲ್ಲಿ

ಕಲಂ 144 ಸಿ.ಆರ್.ಪಿ.ಸಿ ಜಾರಿಯಲ್ಲಿತ್ತು. ಕೆಲವು ಮುಖ್ಯ ಸ್ಥಳಗಳಲ್ಲಿ ಪೊಲೀಸ್ ಪಿಕೇಟ್ ಮತ್ತು ಗಸ್ತು ವ್ಯವಸ್ಥೆಯನ್ನು ಮಾಡಲಾಗಿ, ರಾತ್ರಿ 8-30 ಗಂಟೆಯವರೆಗೆ ಯಾವುದೇ ಅಹಿತಕರ ಘಟನೆಗಳು ನಡೆದಿರುವುದಿಲ್ಲ. ಅಂದರೆ 15ನೇ ತಾರೀಖು ಕೂಡ ಎಂಟೂವರೆವರೆಗೆ ಯಾವುದೇ ಘಟನೆ ಬೆಂಗಳೂರಿನಲ್ಲೂ ನಡೆದಿಲ್ಲ. ಅಲ್ಲೂ ಕೂಡ ನಡೆದಿಲ್ಲ. ಆ ರಾತ್ರಿ ಸುಮಾರು 8-30ರ ವೇಳೆಗೆ ಜಗಜೀವನರಾಮ್ ನಗರದ ಪೊಲೀಸ್ ಠಾಣೆಯ ಸರಹದ್ದಿನಲ್ಲಿನ 9ನೇ ಮುಖ್ಯ ರಸ್ತೆಯಲ್ಲಿ ಎರಡು ಗುಂಪಿಗೆ ಸೇರಿದ ಕೆಲವು ಜನರು ಒಮ್ಮಿಂದೊಮ್ಮಲೇ ಪರಸ್ಪರ ಕಲ್ಲು ತೂರಾಟ ಮತ್ತು ಬಾಟಲುಗಳನ್ನು ತೂರಾಡಲು ಪ್ರಾರಂಭಿಸಿದಾಗ, ಈ ವರದಿ ಬಂದಕೂಡಲೇ ಬಂದೋಬಸ್ತಿನಲ್ಲಿದ್ದ ಪೊಲೀಸರು ಘಟನೆ ಸ್ಥಳಕ್ಕೆ ಧಾವಿಸಿ ಜನರನ್ನು ಓಡಿಸಿರುತ್ತಾರೆ. ಚದುರಿದ ಜನರ ಗುಂಪು ಪಾದರಾಯನಪುರ ಕಾಂಪೌಂಡ್, ವೆಂಕಟಸ್ವಾಮಿ ಗಾರ್ಡನ್, ಮುಂತಾದ ಸ್ಥಳಗಳಲ್ಲಿ ಕಲ್ಲು ಮತ್ತು ಬಾಟಲು ತೂರಾಟದಿಂದ ಇದ್ದ ಜನರನ್ನು ಪೊಲೀಸರು ಚದುರಿಸಿರುತ್ತಾರೆ. ಈ ಘಟನೆಯಲ್ಲಿ ಪೊಲೀಸ್ ಸಿಬ್ಬಂದಿಗೆ ಗಾಯವಾಗಿದ್ದು, ಹೊರ ರೋಗಿಗಳಾಗಿ ಚಿಕಿತ್ಸೆ ಪಡೆದುಕೊಂಡು ಬಂದಿರುತ್ತಾರೆ. ಅದೇ ರಾತ್ರಿ ಸುಮಾರು ಒಂಭತ್ತೂವರೆ ಗಂಟೆಗೆ ಮೂರು ಘಟನೆಗಳಲ್ಲಿ, ಮೂರು ವ್ಯಕ್ತಿಗಳು ಹಲ್ಲೆಗೆ ಒಳಗಾಗಿರುತ್ತಾರೆ. ಇದೇ ರಾತ್ರಿ ಸುಮಾರು 9-30 ಕ್ಕೆ ವಿನಾಯಕನಗರ 7ನೇ ಅಡ್ಡರಸ್ತೆಯಲ್ಲಿರುವ ವೈನ್ ಸ್ಟೋರಿಗೆ ನುಗ್ಗಿ, ಟೇಬಲ್, ಟಿ.ವಿ. ಫ್ರಿಡ್ಜ್ ಮತ್ತು ಮಧ್ಯದ ಬಾಟಲುಗಳನ್ನು ಒಡೆದು ಹಾಕಿ, ಕ್ಯಾಷ್ ಬ್ಯಾಗ್‌ನಲ್ಲಿದ್ದಂತಹ ಎಂಟು ಸಾವಿರ ರೂಪಾಯಿಗಳನ್ನು ದೋಚಿ, ವೈನ್ ಸ್ಟೋರ್ ಮುಂಭಾಗದಲ್ಲಿ ನಿಲ್ಲಿಸಿದ್ದ ಯಮಾ, ಆರ್ ಎಕ್ಸ್ 100 ಮತ್ತು ಮೋಟಾರು ಸೈಕಲ್ ನಂ.ಕೆ.ಎಸ್.ಎಸ್ 2009 : 51 ಅನ್ನು ಸುಟ್ಟು ಹಾಕಿರುತ್ತಾರೆ.

4.10 ಪಿಎಂ

ದಿನಾಂಕ : 16-3-02 ರಂದು ಬೆಳಿಗ್ಗೆ ಸುಮಾರು ಹತ್ತು ಗಂಟೆಯವರೆಗೆ ಜಗಜೀವನರಾಂ ನಗರ ಪೊಲೀಸ್ ಠಾಣೆ ಸರಹದ್ದಿನಲ್ಲಿ ಸಂಪೂರ್ಣವಾಗಿ ಶಾಂತಿ ವಾತಾವರಣ ಇತ್ತು. ಸುಮಾರು 10-20 ಗಂಟೆಯ ವೇಳೆಗೆ ಸ್ಥಳೀಯ ಶಾಸಕರು ನರಸಿಂಹಯ್ಯ ಕಾಂಪೌಂಡ್‌ನಲ್ಲಿ ತಮ್ಮ ಹಿಂಬಾಲಕರೊಂದಿಗೆ ಹೋಗಿ ಹಿಂದಿನ ದಿನದ ಘಟನಾವಳಿಗಳ ಬಗ್ಗೆ ಕೆಲವರಿಂದ ವಿವರಗಳನ್ನು ಪಡೆಯುತ್ತಿದ್ದಾಗ ಒಮ್ಮಿಂದೊಮ್ಮೆ 9ನೇ ಮುಖ್ಯರಸ್ತೆಯ ದಿಕ್ಕಿನಿಂದ ಕಲ್ಲು ಮತ್ತು ಬಾಂಬ್‌ಗಳನ್ನು ತೂರಿದ್ದು ನೋಡಿ ಸ್ಥಳದಲ್ಲಿದ್ದ ಪೊಲೀಸರು ಸದರಿ ಶಾಸಕರನ್ನು ಕೂಡಲೇ ಪೊಲೀಸ್ ಠಾಣೆಯಲ್ಲಿ ರಕ್ಷಣೆ ನೀಡಿ ವಿಜಯನಗರಕ್ಕೆ ಕಳುಹಿಸಿರುತ್ತಾರೆ. ಈ ಕಲ್ಲು ತೂರಾಟದಲ್ಲಿ ಒಬ್ಬರು ಪಿಎಸ್‌ಐ ಯವರಿಗೆ ಗಾಯವಾಗಿದ್ದು ಚಿಕಿತ್ಸೆ ಪಡೆಯುತ್ತಿದ್ದಾರೆ. ದಿನಾಂಕ : 15-3-2002ರವರೆಗೆ ಜಗಜೀವನರಾಮ್ ನಗರದ ಸರಹದ್ದಿನಲ್ಲಿ ನಡೆದ ಘಟನೆಗಳ ಹತ್ತು ಪ್ರಕರಣಗಳನ್ನು ದಾಖಲು ಮಾಡಲಾಗಿದೆ. ಈ ಎಲ್ಲಾ ಹತ್ತು ಪ್ರಕರಣಗಳಲ್ಲಿ ಒಟ್ಟು 41 ಜನರನ್ನು ದಸ್ತಗಿರಿ ಮಾಡಿ, ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ನ್ಯಾಯಾಲಯದ ಬಂಧನದಲ್ಲಿರುತ್ತಾರೆ. ಈ ಗಲಭೆಯಿಂದ ಸುಮಾರು 28000 ರೂಪಾಯಿಗಳಷ್ಟು ನಗದು ಹಣ ಮತ್ತು ಬೆಂಕಿ ಹಚ್ಚಿದ್ದರಿಂದ 27000 ರೂಪಾಯಿಗಳಷ್ಟು ನಷ್ಟ ಸಂಭವಿಸಿರುತ್ತದೆ. ದಿನಾಂಕ : 16-2-2002 ರಿಂದ ಪ್ರತಿನಿದ ಬೆಳಿಗ್ಗೆ 6-00 ಗಂಟೆಯಿಂದ ಸಂಜೆ 6-00 ಗಂಟೆಯವರೆಗೆ ಕರ್ಫ್ಯೂ ಜಾರಿಗೊಳಿಸಿದ್ದು ಯಾವುದೇ ಅಹಿತಕರ ಘಟನೆಗಳು ನಡೆದಿರುವುದಿಲ್ಲ. ಆದರೆ ಈಗಾಗಲೇ ನಾವು ಕರ್ಫ್ಯೂವನ್ನು ತೆಗೆದುಹಾಕಿದ್ದೇವೆ.

ಮುಂಜಾನೆ ಬರೇ 144ನೇ ಸೆಕ್ಷನ್‌ನ್ನು ಇಟ್ಟಿದ್ದೇವೆ. ರಾತ್ರಿ ಹೊತ್ತಿನಲ್ಲಿ ಮಾತ್ರ ಅಲ್ಲಿ ಕರ್ಫ್ಯೂ ಜಾರಿಯಲ್ಲಿದೆ. ಏಕೆಂದರೆ ತಾವುಗಳು ಹೇಳಿದ ಹಾಗೆ ನಾಗರಾಜ್ ಎನ್ನುವವರು ಹಾಸ್ಪಿಟಲ್‌ನಲ್ಲಿ ತೀರಿಕೊಂಡು ಹೋದಮೇಲೆ ಪುನಃ ಅಲ್ಲಿ ಅಹಿತಕರ ಘಟನೆಗಳು ಆಗಬಾರದು ಮತ್ತು ಯಾವುದೇ ಒಂದು ತೊಂದರೆ ಆಗಬಾರದು ಎನ್ನತಕ್ಕಂಥ ದೃಷ್ಟಿಯಿಂದ ಮತ್ತು ಮುನ್ನೆಚ್ಚರಿಕೆ ವಹಿಸಬೇಕೆಂದು ಹೇಳಿ ಕರ್ಫ್ಯೂವನ್ನು ಸದ್ಯಕ್ಕೆ ಜಾರಿಯಲ್ಲಿಟ್ಟಿದ್ದೇವೆ. ರಾತ್ರಿ ಮಾತ್ರ ಕರ್ಫ್ಯೂ ಜಾರಿಯಲ್ಲಿದೆ.

ದಿನಾಂಕ : 18-3-02ರಂದು ರಾತ್ರಿ 11 ಗಂಟೆ ಸಮಯದಲ್ಲಿ ನಾಲ್ಕು ಜನ ದುಷ್ಕರ್ಮಿಗಳು ಒಬ್ಬ ವ್ಯಕ್ತಿಯನ್ನು ಹೊಡೆದು ಹಲ್ಲೆ ಮಾಡಿರುತ್ತಾರೆ. ಇದರ ಬಗ್ಗೆಯೂ ಕೂಡ ಬ್ಯಾಟರಾಯನಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ. ದಿನಾಂಕ : 15-3-02 ರಿಂದಲೇ ಜಂಟಿ ಕಮಿಷನವರು ತಮ್ಮನೇರ ಉಸ್ತುವಾರಿಯಲ್ಲಿ ವ್ಯಾಪಕ ಬಂದೋಬಸ್ತ್ ಮಾಡಿದ್ದು ಕೆಎಸ್‌ಆರ್‌ಪಿ, ಸಿಎಆರ್, ಪ್ಲಾಟೂನ್‌ಗಳಲ್ಲದೆ ಒಂದು ಕಂಪನಿ ಆರ್‌ಎಎಫ್‌ನ್ನು ಸಹ ಕಾನೂನು ಸುವ್ಯವಸ್ಥೆ ಕಾಪಾಡಲು ನೇಮಿಸಲಾಗಿದೆ. ಪೊಲೀಸ್ ಮಹಾನಿರ್ದೇಶಕರೂ ಕೂಡ ಸ್ಥಳಕ್ಕೆ ಎರಡು ಬಾರಿ ಭೇಟಿ ನೀಡಿ ಪೊಲೀಸ್ ವ್ಯವಸ್ಥೆ ಬಗ್ಗೆ ಗಮನ ಹರಿಸಿದ್ದಾರೆ ಈಗ ಪರಿಸ್ಥಿತಿಯು ಸದ್ಯಕ್ಕೆ ಶಾಂತವಾಗಿದೆ. ಮತ್ತು ಈಗ ತಾವುಗಳು ಹೇಳಿದ ಹಾಗೆ ಅಲ್ಲಿ ಮೊಹಲ್ಲಾ ಕಮಿಟಿಗಳನ್ನೂ ಕೂಡ ನಾವು ರಿವೈಸ್ ಮಾಡಬೇಕು. ಎರಡೂ ಕೋಮಿನವರೂ ಕೂಡ ಸೌಹಾರ್ದತೆಯಿಂದ ಬಾಳಲಿ ಎನ್ನತಕ್ಕಂಥದ್ದು ನಮ್ಮೆಲ್ಲರ ಆಶೆಯಾಗಿದೆ. ಪೊಲೀಸರು ಕೂಡ ಅದೇ ನಿಟ್ಟಿದಲ್ಲಿ ಕೆಲಸ ಮಾಡುತ್ತಾ ಇದ್ದಾರೆ. ತಾವುಗಳೂ ಕೂಡ ಅವರಿಗೆ ಸಹಕರಿಸಿ ಅಲ್ಲಿ ಶಾಂತಿಯನ್ನು ಕಾಪಾಡಲು ಸರ್ವ ಪ್ರಯತ್ನಗಳನ್ನು ಮಾಡಿದ್ದೀರಿ. ಪೊಲೀಸರ ಬಗ್ಗೆ ತಾವು ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದೀರಿ. ಪೊಲೀಸರೂ ಕೂಡ ಅಲ್ಲಿನ ಎಲ್ಲಾ ಕೋಮಿನ ಜನರ ಜೊತೆಯಲ್ಲಿ ಸೌಹಾರ್ದತೆಯಿಂದ ಇದ್ದು ಕೆಲಸ ಮಾಡಿತೋರಿಸಿದ್ದಾರೆ. ಅದರ ಬಗ್ಗೆ ಜನರು ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದ್ದಾರೆ. ಇಲ್ಲದಿದ್ದರೆ 1991-92ರಲ್ಲಿ ಏನು ಘಟನೆ ನಡೆಯಿತು, ಅಂಥ ಒಂದು ಪರಿಸ್ಥಿತಿ ಅಲ್ಲಿಯೂ ಆಗುತ್ತಾ ಇತ್ತು ಎಂದು ಎಲ್ಲರೂ ಕೂಡ ಹೇಳುತ್ತಾ ಇದ್ದಾರೆ. ಅದೇನೋ ದುರ್ದೈವ ಒಂದು ಸಾರಿ ಉರ್ದು ಬುಲೆಟಿನ್ ಇಶ್ಯೂ ಮಾಡಿದ್ದಾರೆ ಎಂದು ಯಾವುದೋ ಸುದ್ದಿ ಬಂದ ತತ್‌ಕ್ಷಣ ಗಲಾಟೆಯಾಗಿ ಆಗಲೂ ಕೂಡ 8-10 ಜನರು ಸತ್ತಿದ್ದರು. ಕಾವೇರಿ ರಯಾಟ್ಸ್‌ನಲ್ಲಿ ಕೂಡ ಗಲಾಟೆಯಾಗಿ ಅಲ್ಲೇ 16 ಜನರು ಸತ್ತಿದ್ದರು. ಅದು ಅಂಥ ಒಂದು ಸೂಕ್ಷ್ಮ ಪ್ರಾದಂಥ ಪ್ರದೇಶ. ನಮ್ಮ ಇಲಾಖೆಗೂ ಕೂಡ ಸೂಕ್ಷ್ಮ ಪ್ರದೇಶವೆಂದು ಮಾಹಿತಿ ಇದೆ. ನಮ್ಮ 49 ಪೊಲೀಸ್ ಸ್ಟೇಷನ್‌ಗಳನ್ನು ಏನು ಅಪ್‌ಗ್ರೇಡ್ ಮಾಡಿದ್ದೇವೆ, ಅದರಲ್ಲಿ ಈ ಸ್ಟೇಶನ್ ಕೂಡ ಬರುತ್ತದೆ. ಬೆಂಗಳೂರು ನಗರದಲ್ಲಿ ಪೊಲೀಸರ ಕೊರತೆ ಇದೆ. ನಮ್ಮಲ್ಲಿ ಹೆಚ್ಚು ಕಡಿಮೆ ನಾಲ್ಕು ಸಾವಿರ ವೇಕೆನ್ಸಿಗಳಿವೆ. ಆದರೆ ಕೋರ್ಟ್‌ನವರು ಸ್ಟೇ ಕೊಟ್ಟಿದ್ದರಿಂದ ಎರಡು ಸಾವಿರ ಪೊಲೀಸ್ ಹುದ್ದೆಗಳನ್ನು ನಾವು ರಿಕ್ರೂಟಮೆಂಟ್ ಮಾಡುವುದಕ್ಕೆ ಆಗಲಿಲ್ಲ. ಇನ್ನೂ ಎರಡು ಸಾವಿರಕ್ಕೆ ಹುದ್ದೆಗಳನ್ನು ತುಂಬಲು ನಾವು ಈಗಾಗಲೇ ಕಾಲ್‌ಫಾರ್ ಮಾಡಿದ್ದೇವೆ. ಅದರಲ್ಲಿಯೂ ಕೂಡ ಎಲ್ಲವೂ ಸುರುಳಿತವಾದರೆ ಆರು ತಿಂಗಳೂಗಳಲ್ಲಿ ಆ ಪ್ರೋಸೆಸ್ ಎಲ್ಲವೂ ಮುಗಿದು ಹೋಗುತ್ತದೆ. ಅನೇಕ ಸಾರಿ ನಾವು ಹೆಚ್ಚಿನ ಪ್ರಯತ್ನ ಪಟ್ಟು ಹೆಚ್ಚಿನ ಸಿಬ್ಬಂದಿ ಕೊಡಬೇಕೆಂದು ಬಂದರೆ, ಕೆಲವು ಸಲ ಕೋರ್ಟು ಕಚೇರಿಗಳು ಮತ್ತು ಜನರು ರಿಟ್ ಹೋಗತಕ್ಕಂಥಾದ್ದು ಪ್ರಜಾಪ್ರಭುತ್ವದಲ್ಲಿ ಇದು ಸಹಜವಾಗಿದೆ.

ಹಾಗಾಗಿ ಕೆಲವು ಸಲ ನಮಗೆ ಆಡಚಣೆ ಬಂದರೂ ಕೂಡ ಇವುಗಳೆಲ್ಲವನ್ನೂ ಬಗೆಹರಿಸುವ ಪ್ರಯತ್ನಗಳನ್ನು ನಾವು ಮಾಡುತ್ತೇವೆ. ಅದರ ಜೊತೆಗೆ ಈ ಕಮ್ಯೂನಲ್ ಹಾರ್ಮನಿ, ನ್ಯಾಶನಲ್ ಇಂಟಿಗ್ರೇಷನ್, ಆ ಕಮಿಟಿಗಳನ್ನು ಅಲ್ಲಿ ಬಲಗೊಳಿಸಬೇಕು; ಮತ್ತು ವಿಶೇಷವಾಗಿ ಈ ಸೆಕ್ಯುಲರ್ ಮೈಂಡೆಡ್ ಜನರೇನಿದ್ದಾರೆ, ಅಥವಾ ಕಮಿಟೆಡ್ ಆರ್ಗನೈಸೇಶನ್ಸ್ ಏನಿವೆ, ಅವರುಗಳು ಅಲ್ಲಿ ಸ್ವಲ್ಪ ಕೆಲಸ ಮಾಡತಕ್ಕಂಥ ಅವಶ್ಯಕತೆ ಇದೆ. ಏಕೆಂದರೆ ಎರಡೂ ಕೋಮಿನವರು ಸೌಹಾರ್ದತೆಯಿಂದ ನಡೆದುಕೊಂಡು ಹೋಗತಕ್ಕಂಥಾದ್ದು ಅಥವಾ ಒಂದೇ ಕಡೆ ಬಾಳಿ ಬದುಕಿ, ಪರಸ್ಪರರು ಬಹಳ ಗೌರವರದಿಂದ ನೋಡಿಕೊಳ್ಳತಕ್ಕಂಥಾದ್ದು ಬಹಳ ಮುಖ್ಯವಾಗಿದೆ. ಅದಕ್ಕೆ ಪ್ರಮೋಟ್ ಮಾಡತಕ್ಕಂಥ ಸಂಸ್ಥೆಗಳು ಎನ್‌ಜಿಓಗಳು. ಅದು ಯಾರೇ ಇರಲಿ, ಯಾವ ಕೋಮಿನವರದ್ದೇ ಇರಲಿ, ಅವರುಗಳು ಮುಂದೆ ಬಂದರೆ ಬಹಳ ಒಳ್ಳೆಯದು. ಇಲ್ಲವಾದಲ್ಲಿ ಬಂದವರೆಲ್ಲಾ ಅದಕ್ಕೆ ಎಣ್ಣೆ ಹಾಕಿಕೊಂಡು ಹೋದರೆ, ಬೆಂಕಿ ಹಚ್ಚಿಕೊಂಡು ಹೋದರೆ ಅಲ್ಲಿ ಅಶಾಂತಿಯಾಗುತ್ತದೆ. ಅದಕ್ಕಾಗಿ ನಾವು ಯಾವಾಗಲೂ ಅಂಥ ಸೂಕ್ಷ್ಮ ಪ್ರದೇಶಗಳಲ್ಲಿ ಒಳ್ಳೆಯ ಎನ್‌ಜಿಓಗಳನ್ನು ಸೆಕ್ಯುಲರ್ ಪೋರ್ಸಸ್‌ಗಳನ್ನು ಸ್ವಲ್ಪ ಸ್ಟ್ರೆಂಗ್ತನ್ ಮಾಡತಕ್ಕಂಥ ಅವಶ್ಯಕತೆ ಇದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಮತ್ತು ನಾಗರಾಜ್‌ರವರ ಕೊಲೆ ಪ್ರಕರಣದಲ್ಲಿ ಅವರೇನು ತೀರಿಕೊಂಡು ಹೋಗಿದ್ದಾರೆ, ಅದಕ್ಕೆ ಯಾರು ಕಾರಣಕರ್ತರು ಎನ್ನತಕ್ಕಂಥಾದ್ದನ್ನು ಈಗಾಗಲೇ ಕಂಡುಹಿಡಿದು ಮೂವರಿಗೆ ಅರೆಸ್ಟ್ ಮಾಡಿದ್ದಾರೆ. ಇನ್ನೂ ಕೂಡ ಇನ್‌ವೆಸ್ಟಿಗೇಶನ್ ನಡೆದಿದೆ. ಅದನ್ನು ಪುನಃ ನಾನು ಇನ್‌ವೆಸ್ಟಿಗೇಶನ್ ಸ್ಟೇಜ್‌ನಲ್ಲಿ ಯಾರು ಏನು ಎಂಬುದನ್ನು ಹೇಳುವ ಅವಶ್ಯಕತೆಯಿಲ್ಲ. ಸರಕಾರ ಬಿಗಿ ಬಂದೋಬಸ್ತ್ ಮಾಡುತ್ತದೆ. ಎಲ್ಲಾ ಕ್ರಮಗಳನ್ನು ಜರುಗಿಸುತ್ತದೆ. ಯಾರೇ ಜಾತಿ ಹೆಸರಿನಲ್ಲಿ, ಧರ್ಮದ ಹೆಸರಿನಲ್ಲಿ, ಭಾಷೆ ಹೆಸರಿನಲ್ಲಿ, ಈ ರಾಜ್ಯದಲ್ಲಿ ಅಥವಾ ಈ ನಗರದಲ್ಲಿ ಅಶಾಂತಿಯನ್ನು ಮೂಡಿಸಕ್ಕಂಥಾದ್ದು ಮತ್ತು ಅಶಾಂತಿಯನ್ನು ಸೃಷ್ಟಿ ಮಾಡತಕ್ಕಂಥ ಪ್ರಯತ್ನವನ್ನು ಮಾಡಿದರೆ, ಸರಕಾರ ಅದಕ್ಕೆ ಅಸ್ಪದವನ್ನು ಕೊಡುವುದಿಲ್ಲ. ಸರಕಾರ ಅದನ್ನು ಸಹಿಸುವುದಿಲ್ಲ. ನಮ್ಮ ಸಂಪೂರ್ಣವಾದಂಥ ಶಕ್ತಿಯನ್ನು ಉಪಯೋಗ ಮಾಡಿ, ಅದನ್ನು ದಮನಗೊಳಿಸುತ್ತೇವೆ ಎನ್ನುವ ಮಾತನ್ನು ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ ಮತ್ತು ನಾವು ಈ ಕುರಿತು ಎಸಿಸಿ ಯವರಿಗೆ ವಿಚಾರಣೆ ಮಾಡುವ ಜವಬ್ದಾರಿಯನ್ನು ಕೊಟ್ಟಿದ್ದೇವೆ. ನೀವೇ ಪೊಲೀಸರು ಚೆನ್ನಾಗಿ ಕೆಲಸ ಮಾಡಿದ್ದಾರೆಂದು ಹೇಳಿದ್ದೀರಿ. ಅಂದಮೇಲೆ ನಾವು ಅವರ ಮೇಲೆ ಸಂಶಯ ಇಟ್ಟುಕೊಳ್ಳುವುದು ಬೇಡ. ನೀವು ಎಸಿಪಿ ಬೇಡ, ಉನ್ನತ ಅಧಿಕಾರಿ, ಅಂದರೆ, ಡಿಸಿಪಿ ಅಥವಾ ಜಾಯಿಂಟ್ ಕಮಿಶನರ್‌ರನ್ನು ನಾವು ಕಳುಹಿಸುತ್ತೇವೆ. ಅಲ್ಲಿ ಏನು ನಡೆದಿದೆ, ಏನು ಇಲ್ಲ ಎನ್ನುವುದನ್ನು ತಿಳಿದುಕೊಳ್ಳಲು ಅಲ್ಲಿ ಏನು ಕಾರಣ, ಯಾವ ಕಮ್ಯುನಿಟಿಯಿಂದ ಇದು ಬರುತ್ತಾ ಇದೆ ಅಥವಾ ಬ್ಯಾಡ್ ಎಲಿಮೆಂಟ್ಸ್ ಯಾವ ಜಾತಿಯಲ್ಲಿ ಯಾವ ಭಾಗದಲ್ಲಿ ಇದ್ದಾರೆ, ಎನ್ನುವುದನ್ನು ಕೂಡ ಕಂಡುಹಿಡಿಯುವುದಕ್ಕೆ ಸಾಧ್ಯವಾಗಬಹುದು ಎಂಬ ಆಸೆಯಿಂದ ನಾವು ಜಾಯಿಂಟ್ ಕಮಿಶನರ್ ಆಫ್ ಪೊಲೀಸ್‌ರ ಅವರನ್ನು ವಿಚಾರಣೆಗೆ ಕಳುಹಿಸಿಕೊಡುತ್ತೇವೆ. ತಮಗೆ ಗೊತ್ತಿರುವ ಹಾಗೆ ಮತ್ತು ತಾವುಗಳೂ ಕೂಡ ಮಂತ್ರಿಗಳಾಗಿ ಕೆಲಸ ಮಾಡಿರುತ್ತೀರಿ. ತಾವು ಒಂದು ಮಾತನ್ನು ಹೇಳಿದ್ದೀರಿ. ನನಗೆ ಬಹಳ ಸಂತೋಷವಾಯಿತು. ಸಿಂಧ್ಯರವರ ಕಾಲದಲ್ಲಿಯೂ ಕೂಡ ಮೃತರ ಕುಟುಂಬದವರಿಗೆ ನೌಕರಿ ಕೇಳಿದರೆ ಕೊಡುವುದಕ್ಕೆ ಆಗಲಿಲ್ಲ. ಕೊನೆಗೆ ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ಸ್ವಲ್ಪ ಹಣ ಕೊಡಿಸುವುದಕ್ಕೆ

ಆಯಿತು ಎಂದು ಹೇಳಿದ್ದೀರಿ. ಅದೇ ರೂಲ್ಸ್ ಏನಿವೆ ಅವುಗಳ ಕಂಟಿನ್ಯೂ ಆಗಿವೆ. ಅದಕ್ಕಾಗಿ..

ಶ್ರೀ ವಿ. ಸೋಮಣ್ಣ: ಮೃತ ನಾಗರಾಜ್‌ರವ ಫ್ಯಾಮಿಲಿ ತುಂಬಾ ಕಷ್ಟದಲ್ಲಿದ್ದಾರೆ. ಅವರ ಮಗ ಒಬ್ಬನೇ ಇದ್ದಾನೆ. ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಮನಸ್ಸು ಮಾಡಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ : ರೂಲ್ಸ್‌ನಲ್ಲಿ ಪ್ರಾವಿಷನ್ ಇಲ್ಲ. ಮುಖ್ಯಮಂತ್ರಿಯವರ ಪರಿಹಾರ ನಿಧಿಯಿಂದ ಏನಾದರೂ ಸಹಾಯ ಮಾಡಬೇಕೆಂದಿದ್ದರೆ ಅದನ್ನು ನೋಡೋಣ. ಅಥವಾ ಪ್ರೈವೇಟ್ ಆರ್ಗ್‌ನೈಸೇಶನ್‌ನಲ್ಲಿ ಮಾನ್ಯ ಮುಖ್ಯಮಂತ್ರಿಯವರಿಂದ ಹೇಳಿಸಿ ಯಾವುದಾದರೂ ಕಾರ್ಖಾನೆಯಲ್ಲಿಯೋ, ಬೇರೆ ಆರ್ಗ್‌ನೈಸೇಶನ್‌ಗಳಲ್ಲಿ ಕೂಡಿಸಲು ಪ್ರಯತ್ನ ಮಾಡತಕ್ಕಂಥಾದ್ದನ್ನು ನಾವು ಮಾಡುತ್ತೇವೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ವಿಶೇಷವಾಗಿ ಬೆಂಗಳೂರು ನಗರದಲ್ಲಿ ಎಲ್ಲರೂ ಕೂಡ ಈ ಒಂದು ಸಂದರ್ಭದಲ್ಲಿ ಬಹಳ ಶಾಂತಿಯನ್ನು ಕಾಪಾಡಿದ್ದಕ್ಕಾಗಿ ಮತ್ತೊಮ್ಮೆ ನಾನು ಎಲ್ಲರನ್ನೂ ಅಭಿನಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಇವೊತ್ತಿನ ಕಾರ್ಯಕ್ರಮಗಳ ಪಟ್ಟಿ ಪ್ರಕಾರ ನಿಯಮ 69ರ ಅಡಿಯಲ್ಲಿ ಬರ, ನೀರು, ಮತ್ತು ವಿದ್ಯುಚ್ಛಕ್ತಿ ಬಗ್ಗೆ ಪ್ರಸ್ತಾಪಿಸಿದ ಉತ್ತರ ಎಂದು ಇತ್ತು. ಆದರೆ ವಿರೋಧ ಪಕ್ಷದ ನಾಯಕರು ಮತ್ತು ಸರಕಾರದವರೊಂದಿಗೆ ನಾನು ಸಮಾಲೋಚನೆ ಮಾಡುತ್ತೇವೆ. ಈಗ ಬಜೆಟ್ ಭಾಷಣ ಪ್ರಾರಂಭವಾಗುತ್ತದೆ. ಎಲ್ಲದಕ್ಕೂ ಉತ್ತರವನ್ನೂ ಮಾನ್ಯ ಮುಖ್ಯಮಂತ್ರಿಯವರು ಅಥವಾ ಸರ್ಕಾರವತಿಯಿಂದ ಒಂದೇ ಸಲ ಕೊಡುವುದು ಎಂದು ತೀರ್ಮಾನವಾಗಿದೆ. ಈಗ ದಯಮಾಡಿ ಶ್ರೀಮಾನ್ ಜಗದೀಶ್ ಶೆಟ್ಟರ್‌ರವರು ಭಾಷಣ ಪ್ರಾರಂಭ ಮಾಡಬೇಕು.

6) ವಿತ್ತೀಯ ಕಾರ್ಯಕಲಾಪ

2002-2003ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಸಾಮಾನ್ಯ ಚರ್ಚೆ.

ಶ್ರೀ ಜಗದೀಶ್ ಶೆಟ್ಟರ್ (ವಿರೋಧ ಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ನಿನ್ನೆ ಈ ರಾಜ್ಯದ ಈ ವರ್ಷದ ಬಜೆಟ್‌ನ್ನು ಮಂಡನೆ ಮಾಡಿದ್ದಾರೆ. ಆ ಸಂದರ್ಭದಲ್ಲಿ ಕೊನೇ ಪ್ಯಾರದಲ್ಲಿ ಒಂದು ವಿಷಯವನ್ನು ಅವರು ಹೇಳಿದರೆ. "ಮುಂಗಡ ಪತ್ರವನ್ನು ಸದನದಲ್ಲಿ ಸವಿಸ್ತಾರವಾಗಿ ಚರ್ಚಿಸಲಾಗುವುದು. ಚರ್ಚೆಯ ನಂತರ ಸರ್ಕಾರವು ಪೂರ್ಣ ಲೇಖಾನುದಾನ ಕೋರುತ್ತದೆ "ವೆಂದು. ಅಂದರೆ ಈಗ 4 ತಿಂಗಳಿಗೆ ಲೇಖಾನುದಾನ ತೆಗೆದುಕೊಳ್ಳುವುದು ಆಮೇಲೆ ಸದನದಲ್ಲಿ ಇದರ ಬಗ್ಗೆ ಸಂಪೂರ್ಣವಾಗಿ ಚರ್ಚೆ ಮಾಡಲಾಗುವುದು ಎಂದು ಮಾನ್ಯ ಮುಖ್ಯಮಂತ್ರಿಗಳು ಬಜೆಟ್ ಮಂಡನೆ ಮಾಡಿದ್ದು ನಿನ್ನೆ, ಇವತ್ತು ಮಧ್ಯಾಹ್ನದ ನಂತರ ಬಜೆಟ್ ಮೇಲಿನ ಚರ್ಚೆ ಪ್ರತಿಪಕ್ಷದ ನಾಯಕರಿಂದ, ಸದಸ್ಯರಿಂದ ಪ್ರಾರಂಭವಾಗುತ್ತಿದೆ. ಆಮೇಲೆ ನಮಗೆ ಪೂರಾ ದಿವಸ ಸಿಕ್ಕುವುದು 26ನೇ ತಾರೀಖು ಮಾತ್ರ. ಅಂದರೆ ಬಜೆಟ್ ಮೇಲೆ ಚರ್ಚೆ ಮಾಡಲು ಅವಕಾಶವೇ ಇಲ್ಲದ ಪರಿಸ್ಥಿತಿ ಇಲ್ಲಿ ನಿರ್ಮಾಣವಾಗಿದೆ. ಇವತ್ತು ನಾನು ಮಾತನಾಡಬಹುದು ನಂತರ ಜನತಾ ದಳದ ಮಿತ್ರರು ಮಾತನಾಡಬಹುದು, ಮತ್ತೆ ಕೆಲವು ಶಾಸಕರು ಮಾತನಾಡಬಹುದು. ಆದರೆ ಸವಿಸ್ತಾರವಾಗಿ ಇದರ ಬಗ್ಗೆ ಚರ್ಚೆ ಆಗಬೇಕಾಗಿದೆ.